**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ ಸಂಖ್ಯೆ:- 199/2025</u>**

| | | |
|---|---|---|
| **ಸಾಕ್ಷಿದಾರನ ಹೆಸರು** | : ವಿಶ್ವನಾಥ್ ಕೆ. | **ಪಿ.ಡಬ್ಲ್ಯೂ:-** 17 |
| **ತಂದೆಯ ಹೆಸರು** | : ಲೇಟ್ ಕರಿಯಣ್ಣ | **ಸಿ.ಡಬ್ಲ್ಯೂ:-** 32 |
| **ವಯಸ್ಸು** | : 40 ವರ್ಷ | |
| **ಉದ್ಯೋಗ** | : ಪಿ.ಎಸ್.ಐ ಬಿ.ಎಂ.ಟಿ.ಎಫ್, ಬೆಂಗಳೂರು. | |
| **ವಾಸಸ್ಥಳ** | : ಬೆಂಗಳೂರು. | |

**<u>ಸಾಕ್ಷಿಯನ್ನು ಈ ದಿನ ದಿ:04.04.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-</u>**

1. ನಾನು ದಿ:- 09.06.2020 ರಿಂದ 26.01.2023 ರವರೆಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:- 14.12.2022 ರಂದು ಬೆಳಗಿನ ಜಾವ ಸುಮಾರು 1.15 ಗಂಟೆಯಿಂದ 2 .20 ಗಂಟೆಯವರೆಗೆ ಕೆ.ಆರ್.ಆಸ್ಪತ್ರೆಯಲ್ಲಿ ಗಾಯಾಳು ಸುರೇಶ್ ರವರ ಹೇಳಿಕೆಯನ್ನು ಡಾ. ಮದುರರವರ ಸಮಕ್ಷಮ ದಾಖಲಿಸಿಕೊಂಡು, ಠಾಣೆಗೆ ವಾಪಸ್ಸು ಬಂದು 3 ಗಂಟೆ ಸಮಯದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ:- 140/2022 ಕಲಂ 323, 324, 504, 506 ಸಹವಾಚಕ 34 ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

**3.** ಸಾಕ್ಷಿಯು ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–37 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–37(ಎ) ಎಂದು ಈಗಾಗಲೇ ಮೂಲ ಪ್ರಕರಣ ಎಸ್.ಸಿ ಸಂಖ್ಯೆ:– 246/2023 ರಲ್ಲಿ ಗುರುತಿಸಲಾಗಿರುತ್ತದೆ. ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–38 ಎಂದು ಗುರುತಿಸಲಾಯಿತು.

**4.** ದಿಃ– 14.12.2022 ರಂದು ಆರೋಪಿಯ ಪತ್ತೆಗೆ ಠಾಣಾ ಸಿಬ್ಬಂದಿಗಳಾದ ಚಾ.ಸಾಃ29, 30 ಮತ್ತು ಕರಿಯಪ್ಪ ಎನ್ನುವವರನ್ನು ನೇಮಕ ಮಾಡಿರುತ್ತೇನೆ. ಅದೇ ದಿನ ಮಧ್ಯಾಹ್ನ 3 ಗಂಟೆಗೆ ಚಾ.ಸಾಃ29 ರವರು ಪ್ರಕರಣದಲ್ಲಿ 1 ಮತ್ತು 2 ನೇ ಆರೋಪಿಗಳನ್ನು ಪತ್ತೆ ಹಚ್ಚಿ ಆಟೋ ರಿಕ್ಷಾದ ಜೊತೆಗೆ ನನ್ನ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–26 ಎಂದು, ಸಾಕ್ಷಿಯ ಸಹಿಯನ್ನು ಈಗಾಗಲೇ ಮೂಲ ಪ್ರಕರಣ ಎಸ್.ಸಿ ಸಂಖ್ಯೆ:– 246/2023 ರಲ್ಲಿ ನಿಶಾನೆ ಪಿ–26(ಬಿ) ಎಂದು ಗುರುತಿಸಲಾಗಿರುತ್ತದೆ.

**5.** ನಂತರ 3.30 ರ ಸುಮಾರಿಗೆ ಸದರಿ ಆರೋಪಿತರನ್ನು ವಿಚಾರಣೆ ಮಾಡಿ ಅವರ ವಿರುದ್ಧ ದಸ್ತಗಿರಿ ಕ್ರಮವನ್ನು ಜರುಗಿಸಿ, ಸದರಿ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿತರು ಕೃತ್ಯ ನಡೆದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು, ಬ್ಲೇಡನ್ನು ಮತ್ತು ಅವರ ವಶದಿಂದ ಪಡೆದುಕೊಂಡ ಆಟೋವನ್ನು ಪಂಚರಾದ ಚಾ.ಸಾಃ7 ಮತ್ತು 8 ರವರ ಸಮಕ್ಷಮ ಅಮಾನತ್ತು ಮಹಜರ್ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ಪ್ರತ್ಯೇಕವಾಗಿ ಸೀಲ್ ಮಾಡಿ

ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಬ್ಲೇಡ್ 2 ನೇ ಆರೋಪಿಯ ಜೇಬಿನಿಂದ ದೊರೆತಿದ್ದು ಅದನ್ನು ಕೂಡ ಪ್ರತ್ಯೇಕವಾಗಿ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಈಗಾಗಲೇ ಮೂಲ ಪ್ರಕರಣ ಎಸ್.ಸಿ ಸಂಖ್ಯೆ:– 246/2023 ರಲ್ಲಿ ನಿಶಾನೆ ಪಿ–15(ಬಿ) ಎಂದು ಗುರುತಿಸಲಾಗಿರುತ್ತದೆ.

6. ಮಹಜರ್ ಕಾಲದಲ್ಲಿ ಪೋಟೋವನ್ನು ತೆಗೆಯಲಾಯಿತು. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ–17 ಎಂದು ಗುರುತಿಸಲಾಗಿರುತ್ತದೆ. 1 ನೇ ಆರೋಪಿ ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ, ಗಾಯಾಳು ಸುರೇಶನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಚಾಕುವನ್ನು ಮೋರಿಯಲ್ಲಿ ಎಸೆದಿದ್ದು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತಾನೆ. ಸದರಿ ಹೇಳಿಕೆ ಭಾಗವನ್ನು ನಿಶಾನೆ ಪಿ–39 ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಮುದ್ದೆಮಾಲು:13 ರಿಂದ 17 ನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ತಾಂತ್ರಿಕ ದೋಷದಿಂದ ವಿಸಿ ಟಿವಿ ಮೂಲಕ ಮುಖ್ಯ ವಿಚಾರಣೆ ಮುಂದುವರಿಸಲು ಆಗಿರುವುದಿಲ್ಲ. ಆ ಕಾರಣ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**